ಕರ್ನಾಟಕ ಸರ್ಕಾರ

ಸಂಖ್ಯೆ:ಜಸಂಇ 38 ಕೆಬಿಎನ್ 2017

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸ ಸೌಧ,
ಬೆಂಗಳೂರು, ದಿನಾಂಕ:25/04/2017.

**ಇಂದ:**

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಜಲಸಂಪನ್ಮೂಲ ಇಲಾಖೆ,
ಬೆಂಗಳೂರು.

**ಇವರಿಗೆ:**

ಮುಖ್ಯ ಇಂಜಿನಿಯರ್,
ಜಲ ಸಂಪನ್ಮೂಲ ಅಭಿವೃದ್ಧಿ ಸಂಸ್ಥೆ,
ಬೆಂಗಳೂರು.

**ಮಾನ್ಯರೇ,**

**ವಿಷಯ:-** 2017-18ನೇ ಸಾಲಿನ ದರಪಟ್ಟಿಯಲ್ಲಿ ಕೂಲಿ ದರವನ್ನು ಅಳವಡಿಸುವ ಬಗ್ಗೆ.

**ಉಲ್ಲೇಖ:-** 1. ಕಾರ್ಮಿಕ ಇಲಾಖೆಯ ಅಧಿಸೂಚನೆ ಸಂಖ್ಯೆ:ಕಾಇ 2 ಎಲ್ಎಂಡಬ್ಲ್ಯೂ 2015 ದಿನಾಂಕ:06/01/2017.

2. ಪತ್ರ ಸಂಖ್ಯೆ:ಅಅ/ಮಾ ಮತ್ತು ಇ/ದಪ/ಸಎಇಂ-1/ಜೆಇ-2/ 2017-18/37 ದಿನಾಂಕ:20/04/2017

***

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ(1)ರ ಅಧಿಸೂಚನೆಯಲ್ಲಿ ಸೂಚಿಸಿರುವಂತೆ ದಿನಗೂಲಿ ನೌಕರರಿಗೆ ಕನಿಷ್ಠ ವೇತನ ಕಾಯ್ದೆ 1948ರ ಅನುಸೂಚಿತ ಉದ್ದಿಮೆಗಳಿಗೆ ನಿಗಧಿಪಡಿಸಿರುವ ವೇತನ ದರಗಳನ್ನು ಪಾವತಿಸುತ್ತಿದ್ದಲ್ಲಿ, ಕನಿಷ್ಠ ವೇತನವನ್ನು ನಿಗಧಿಪಡಿಸಿ/ಪರಿಷ್ಕರಿಸಿ ಹೊರಡಿಸಿರುವ ಅಧಿಸೂಚನೆಯಂತೆ ವೇತನವನ್ನು ಪಾವತಿಸಬೇಕಾಗಿರುತ್ತದೆ.

ದಿನಾಂಕ:01/04/2017 ರಿಂದ 31/03/2018ರವರೆಗೆ ಅನ್ವಯಿಸುವಂತೆ ವ್ಯತ್ಯಾಸದ ತುಟ್ಟಿಭತ್ಯೆ ರೂ.49.00ನ್ನು ಸೇರಿಸಿಕೊಂಡು ಜಲಸಂಪನ್ಮೂಲ ಇಲಾಖೆಯ 2017-18ನೇ ಸಾಲಿನ ದರಪಟ್ಟಿಯಲ್ಲಿ ದಿನಗೂಲಿ ನೌಕರರಿಗೆ ನೀಡಬಹುದಾದ ವ್ಯತ್ಯಾಸದ ತುಟ್ಟಿಭತ್ಯೆಯನ್ನು ಪರಿಗಣಿಸುವಂತೆ ಸೂಚಿಸಿದೆ. ದಿನಾಂಕ:01/12/2016 ರಿಂದ ಅನ್ವಯ ವಾಗಿರುವ 2016-17ನೇ ಸಾಲಿನ ದರಪಟ್ಟಿಯನ್ನು 2017-18ನೇ ಸಾಲಿಗೆ ಮುಂದಿನ ಆದೇಶದವರೆಗೆ ಮುಂದುವರೆಸಲಾಗಿದೆ. ಅಲ್ಲದೆ, ಪ್ರತಿ ವರ್ಷ ಹೆಚ್ಚಾಗುವ ಗ್ರಾಹಕ ಬೆಲೆ ಸೂಚ್ಯಂಕಕ್ಕೆ ಅನುಗುಣವಾಗಿ ತುಟ್ಟಿಭತ್ಯೆಯನ್ನು ಏಪ್ರಿಲ್ 1ನೇ ತಾರೀಖಿನಿಂದ ಜಾರಿಗೆ ಬರುವಂತೆ ನೀಡಬೇಕಾಗಿರುತ್ತದೆ ಎಂದು ತಿಳಿಸಲು ನಿರ್ದೇಶಿತನಾಗಿದ್ದೇನೆ.

ತಮ್ಮ ವಿಶ್ವಾಸಿ,

25/04/17

**(ಬಿ. ಹರಿನಾರಾಯಣ)**
ಸರ್ಕಾರದ ಅಧೀನ ಕಾರ್ಯದರ್ಶಿ(ಕೃಭಾಜನಿ)
ಜಲ ಸಂಪನ್ಮೂಲ ಇಲಾಖೆ